

**ಸಿದ್ಧಲಿಂಗಯ್ಯನವರ 'ದಲಿತರು ಬರುವರು ದಾರಿ ಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಸಾಲು ಮೊದಲು ಆಶಯದ ಘೋಷಣೆಯಂತೆ ಕಂಡಿದ್ದರೂ ನಂತರ ಅದು ಎಲ್ಲೆಡೆ ಪ್ರತಿಧ್ವನಿಸಿ, ದಲಿತ ಸಮುದಾಯದ ಖಡಕ್ಕಾದ ರಾಜಕೀಯ ಪ್ರತಿಪಾದನೆಯೇ ಆಯಿತು. ಕವಿತೆಯೊಂದರ ಸಾಲು ದೇಶದ ರಾಜಕಾರಣದಲ್ಲಿ, ಅಸಮಾನತೆಯ ಸಮಾಜದಲ್ಲಿ ಸಾಕಾರವಾದ ಅಪರೂಪದ ಕಾಲ ಅದು.**

ಸ್ಥಾಪಿತ ಕಾವ್ಯತತ್ತ್ವಗಳನ್ನೇ ಉಲ್ಲಂಘಿಸಿದ್ದ ಕವಿ ರೂಪಕ ಹೊಸ ಕಾವ್ಯತತ್ತ್ವದ ಜೊತೆಗೇ ಸಾಮಾಜಿಕ ಬದಲಾವಣೆಯ ಸಿದ್ಧಾಂತವನ್ನೂ ರೂಪಿಸಿತು. ಶಬ್ದದ ಶಕ್ತಿಯನ್ನು, ಕಾವ್ಯದ ಶಕ್ತಿಯನ್ನು ಸಿದ್ಧಲಿಂಗಯ್ಯನವರ ಕಾವ್ಯ ಮತ್ತೆ ಸಿದ್ಧ ಮಾಡಿ ತೋರಿಸಿತು. ಸ್ವಾತಂತ್ರ್ಯೋತ್ತರದ ಕವಿಗಳು ಸಾಮಾನ್ಯವಾಗಿ ಅನುಮಾನಿಸುತ್ತಿದ್ದ ರೆಟರಿಕ್‌ನ ಹೊಸ ಸಾಧ್ಯತೆಯನ್ನೂ ಈ ಕಾವ್ಯ ತೋರಿಸಿತು.

ಸಿದ್ಧಲಿಂಗಯ್ಯನವರ ಕಾವ್ಯ ದಲಿತ ಕಾವ್ಯಮಾರ್ಗವನ್ನು ಉದ್ಘಾಟಿಸಿದಂತೆ ಬಂಡಾಯ ಸಾಹಿತ್ಯಕ್ಕೂ ಒಂದು ಪ್ರೇರಣೆಯಾಯಿತು. ಬಂಡಾಯದ 'ಖಡ್ಗವಾಗಲಿ ಕಾವ್ಯ; ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಧ್ಯೇಯವಾಕ್ಯಕ್ಕೆ ಮಾರ್ಕ್ಸ್‌ವಾದಿ ಸಾಹಿತ್ಯ ತತ್ತ್ವದ ಹಿನ್ನೆಲೆಯೂ ಇತ್ತು; ಈ ಘೋಷಣೆಗೆ ಸಿದ್ಧ ಪುರಾವೆಯಾಗಿ ಸಿದ್ಧಲಿಂಗಯ್ಯನವರ ಕಾವ್ಯವೂ ಜೊತೆಗಿತ್ತು. ದಲಿತ ಸಾಹಿತ್ಯ ಹಾಗೂ ಬಂಡಾಯ ಸಾಹಿತ್ಯಗಳೆರಡೂ ಕರ್ನಾಟಕದ ದಲಿತ, ಶೂದ್ರ, ಮುಸ್ಲಿಂ, ಮಹಿಳಾ ಲೋಕಗಳ ಸಿಟ್ಟಿನ, ಕಾಳಜಿಯ ತರುಣ, ತರುಣಿಯರ ಕ್ರಿಯಾಶೀಲತೆ ಉಕ್ಕಿ ಹೊರಚೆಲ್ಲುವಂತೆ ಮಾಡಿದವು. ಪು.ತಿ.ನ.ರಂಥ ನವೋದಯ ಕವಿಯೂ ಸಿದ್ಧಲಿಂಗಯ್ಯನವರ ಧಾಟಿಯಲ್ಲಿ 'ಹೆಸರೆ ಇಲ್ಲದವರು' ಎಂಬ ಪದ್ಯ ಬರೆದರು. ಅಡಿಗರೂ, ಕಂಬಾರರೂ ಅಂಬೇಡ್ಕರ್ ಕುರಿತ ಕವಿತೆ ಬರೆಯುವ ಕಾಲವೂ ಬಂತು. ಸಿದ್ಧಲಿಂಗಯ್ಯನವರು ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಕನ್ನಡದ ಅತ್ಯಂತ ಪ್ರಭಾವಶಾಲಿ ಕವಿಯಾಗಿ ರೂಪುಗೊಂಡಿದ್ದು ಹೀಗೆ. ಅವರ ಆರಂಭದ ಕಾವ್ಯದ ಪ್ರಭಾವ ಇಪ್ಪತ್ತೊಂದನೆಯ ಶತಮಾನದಲ್ಲೂ ಮುಂದುವರಿದಿದೆ; ಆ ಪ್ರಭಾವ ಇನ್ನೂ ಗಟ್ಟಿಯಾಗಿ ಮುಂದುವರಿಯಬೇಕಾದ ಅಗತ್ಯವೂ ಇದೆ.

ಎಪ್ಪತ್ತು, ಎಂಬತ್ತರ ದಶಕದ ಕರ್ನಾಟಕದ ರಾಜಕಾರಣದಲ್ಲಿ ಬಸವಲಿಂಗಪ್ಪನವರ ಕ್ರಿಯಾಶೀಲತೆ, ದೇವರಾಜ ಅರಸು ರೂಪಿಸಿದ ದಲಿತ–ಹಿಂದುಳಿದ ವರ್ಗಗಳ ರಾಜಕಾರಣ, ಹಾವನೂರ್ ವರದಿಯಿಂದ ಸೃಷ್ಟಿಯಾದ ಹೊಸ ವಿದ್ಯಾವಂತ ವರ್ಗ, ಸಾಮಾಜಿಕ ಹೊಣೆಯನ್ನು ಮುಂಚೂಣಿಗೆ ತಂದ ಲೇಖಕ, ಲೇಖಕಿಯರ ವರ್ಗ, ಕ್ರಿಯಾಶೀಲ ರಂಗಭೂಮಿ, ಪತ್ರಿಕೋದ್ಯಮ, ಚಳವಳಿ ಎಲ್ಲವೂ ಸೇರಿದ ಕಾಲಘಟ್ಟ ಸಿದ್ಧಲಿಂಗಯ್ಯನವರ ರೀತಿಯ ಸಾಹಿತ್ಯಕ್ಕೆ ವ್ಯಾಪಕ ಸ್ವೀಕಾರವನ್ನು